# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಿಂದಗಿ

ಕ್ರ.ಸಂ/ಕ್ಷೇಶಿಕಾ/ಮ.ಬಿ.ಊ.ಕು.ನೀ.ವ್ಯ/2018-19 ದಿನಾಂಕ:02-05-2018

ಗೆ,

ತಾಲೂಕಿನ ಎಲ್ಲ —

ಮುಖ್ಯ ಗುರುಗಳು/ಮುಖ್ಯ ಅಡುಗೆಯವರು

ವಿಷಯ: 2018 ನೇ ಮೇ 12 ರಂದು ನಡೆಯುವ ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ಸಿಬ್ಬಂದಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಕುರಿತು

ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಇವರ ಪತ್ರ ಸಂಖ್ಯೆ ಚುನಾವಣೆ ಸಿಆರ್/ಹಂಚಿಕೆ/3/2018-19 ದಿನಾಂಕ: 25-04-2018

<><><><><>

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ದಿನಾಂಕ:12-05-2018 ರಂದು ನಡೆಯುವ ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ 2018 ರ ಸಿಬ್ಬಂದಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಅಕ್ಷರ ದಾಸೋಹ ವಿಭಾಗದ ಭೂತ್ ಮಟ್ಟದ ಅಡುಗೆ ಸಿಬ್ಬಂದಿಯವರಿಗೆ ವಹಿಸಿದ್ದು ಆದಕ್ಕಾಗಿ, ಶುದ್ಧ ಕುಡಿಯುವ ನೀರು ಹಾಗೂ ಊಟ ಮತ್ತು ಚಹಾ ವ್ಯವಸ್ಥೆಗಾಗಿ ಪ್ರತಿ ಭೂತ್‌ಗೆ ರೂ 1320-00 ರಂತೆ ಬಿಡುಗಡೆ ಮಾಡಿದ್ದು, ಆಯಾ ಸ್ಥಳೀಯ ಮುಖ್ಯ ಅಡುಗೆಯವರ/ಅಡುಗೆಯವರ ಖಾತೆಗಳಿಗೆ ಭೂತ್‌ವಾರು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಶುದ್ಧ ಕುಡಿಯುವ ನೀರನ್ನು ಸಮೀಪದ ಶುದ್ಧ ಕುಡಿಯುವ ನೀರಿನ ಘಟಕದಿಂದ ನೀರಿನ ವ್ಯವಸ್ಥೆ ಮಾಡಿಕೊಳ್ಳುವದು. ಕಾರಣ ಸಂಬಂಧಿಸಿದ ಮುಖ್ಯ ಗುರುಗಳು ತಮ್ಮ ಶಾಲೆಯ ಅಡುಗೆ ಸಿಬ್ಬಂದಿಯವರಿಗೆ ಈ ಕೆಳಕಂಡಂತೆ ಸೂಕ್ತ ಮಾಹಿತಿಯನ್ನು ನೀಡಿ ಚುನಾವಣೆ ಸುವ್ಯವಸ್ಥಿತವಾಗಿ ನಡೆಯುವಂತೆ ಸೂಕ್ತ ವ್ಯವಸ್ಥೆ ಮಾಡುವದು. ಅಡುಗೆ ಸಿಬ್ಬಂದಿಯವರು ತಮಗೆವಹಿಸಿದ ಜವಾಬ್ದಾರಿಯನ್ನು ಸಹಾಯಕ ಅಡುಗೆಯವರ ಸಹಕಾರ ಪಡೆದು ಕಾರ್ಯನಿರ್ವಹಿಸುವದು ತಪ್ಪಿದಲ್ಲಿ ಆಯಾ ಸಿಬ್ಬಂದಿ ಹಾಗೂ ಮುಖ್ಯ ಗುರುಗಳನ್ನೇ ನೇರಹೊಣೆಗಾರರನ್ನಾಗಿಸಲಾಗುವದು.

**ಊಟದ ಮೆನು**

| ಕ್ರ.ಸಂ | ದಿನಾಂಕ | ವೇಳೆ | ಊಟ ಹಾಗೂ ಚಹಾದ ವಿವರ | ಊಟ- |
|---|---|---|---|---|
| 1 | 11-05-2018 | 2-3ಗಂ. | ಊಟ | 2 ರೊಟ್ಟಿ ಚಪಾತಿ,ಅನ್ನ ಸಾರು ಪಲ್ಲೆ |
| 2 | 12-05-2018 | ರಾ.8-9 ಗಂ | ಊಟ | |
| 3 | | ಬೆ.7-7.30 | ಚಹಾ | |
| 4 | | ಬೆ.9-9.30 | ಟಿಫಿನ | |
| 5 | | ಬೆ.11.00 | ಚಹಾ | |
| 6 | | ಮ.1.30-2 ಗಂ | ಊಟ | |
| 7 | | ಸಾ.6-7 ಗಂ | ಚಹಾ ಹಾಗೂ ಅಲ್ಪೋಪಹಾರ | |

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಿಂದಗಿ

ಪ್ರತಿಯನ್ನು ಆದರಪೂರ್ವಕವಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

1) ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ

2) ಮಾನ್ಯ ಚುನಾವಣಾಧಿಕಾರಿಗಳು ಸಿಂದಗಿ/ದೇವರಹಿಪ್ಪರಗಿ ಮತಕ್ಷೇತ್ರ

3) ಮಾನ್ಯ ತಹಶೀಲ್ದಾರರು ಸಿಂದಗಿ

4) ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾ.ಪಂ.ಸಿಂದಗಿ

Scanned by CamScanner